ಕರ್ನಾಟಕ ಸರ್ಕಾರ

# ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತಾಲಯ

ಆನಂದರಾವ್ ವೃತ್ತ, ಬೆಂಗಳೂರು-560009.

ದೂರವಾಣಿ:080-22879336 E-mail:spmbeckar@gmail.com

ಸಂ: ಡಿಹೆಚ್ಎಸ್/ಬಿ.ಇ.ಸಿ/ಪಿಜಿ-ಡಿಇಜಿ/39/2013-14 ದಿನಾಂಕ: 15 .03.2018

## ಪ್ರಕಟಣೆ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯಕ್ಕೆ ಸಂಬಂಧಿಸಿದಂತೆ ಕಾನೂನು ಪ್ರಕರಣಗಳನ್ನು ನಿರ್ವಹಿಸಲು ಗೌರವಧನ ಆಧಾರದಲ್ಲಿ ವಕೀಲರನ್ನು ಕೆಲವು ಷರತ್ತುಗಳೊಂದಿಗೆ ನೇಮಿಸಿಕೊಳ್ಳಲು ಉದ್ದೇಶಿಸಲಾಗಿದೆ. ಷರತ್ತುಗಳನ್ನು ಇಲಾಖೆಯ **karhfw.gov.in** ವೆಬ್ ಸೈಟ್‌ನಲ್ಲಿ ಪರಿಶೀಲಿಸಬಹುದು. ಇಚ್ಛೆಯುಳ್ಳವರು **ದಿನಾಂಕ: 04.04.2018 ರಂದು ಸಂಜೆ 4.00 ಗಂಟೆಗೆ ನೇರ ಸಂದರ್ಶನಕ್ಕೆ (Walk in Interview)** ತಮ್ಮ ಸ್ವವಿವರಗಳು ಹಾಗೂ ಅಗತ್ಯ ದಾಖಲಾತಿಗಳೊಂದಿಗೆ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆನಂದರಾವ್ ವೃತ್ತ, ಬೆಂಗಳೂರು-9 ಇವರ ಕಛೇರಿಯಲ್ಲಿ ಹಾಜರಾಗುವುದು.

ಮುಖ್ಯ ಆಡಳಿತಾಧಿಕಾರಿಗಳು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
ಆನಂದರಾವ್ ವೃತ್ತ, ಬೆಂಗಳೂರು-9

ಕರ್ನಾಟಕ ಸರ್ಕಾರ

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತಾಲಯ, ಆನಂದರಾವ್ ವೃತ್ತ, ಬೆಂಗಳೂರು-560009.**

ದೂರವಾಣಿ:080-22879336 E-mail:spmbeckar@gmail.com

ಸಂ: ಡಿಹೆಚ್‌ಎಸ್/ಬಿ.ಇ.ಸಿ/ಪಿಜಿ-ಡಿಇಜಿ/39/2013-14 ದಿನಾಂಕ: 15.03.2018

**ಪ್ರಕಟಣೆ**

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯಕ್ಕೆ ಸಂಬಂಧಿಸಿದಂತೆ ಕಾನೂನು ಪ್ರಕರಣಗಳನ್ನು ನಿರ್ವಹಿಸಲು ಗೌರವಧನ ಆಧಾರದಲ್ಲಿ ವಕೀಲರನ್ನು ಕೆಲವು ಷರತ್ತುಗಳೊಂದಿಗೆ ನೇಮಿಸಿಕೊಳ್ಳಲು ಉದ್ದೇಶಿಸಲಾಗಿದೆ.

1. ಜಿಲ್ಲಾ / ಪ್ರಧಾನ / ಸತ್ರ ನ್ಯಾಯಾಲಯ ಹಂತದ ನಿವೃತ್ತ ನ್ಯಾಯಾಧೀಶರು/ವಕೀಲರು ಸೇವಾವಧಿ ನೇಮಕದ ದಿನದಿಂದ ಒಂದು ವರ್ಷ ಅಥವಾ ಮುಂದಿನ ಆದೇಶ ನೀಡುವವರಿಗೆ ಯಾವುದು ಮೊದಲು ಅನ್ವಯವಾಗುತ್ತದೆ.
2. ನೇಮಕಾತಿ ಸಂಪೂರ್ಣವಾಗಿ ಗುತ್ತಿಗೆ ಆಧಾರದಲ್ಲಿರುತ್ತದೆ. ನೇಮಕವಾದವರಿಗೆ ಗೌರವಧನ ಪ್ರತಿ ಮಾಹೆಗೆ ರೂ.30,000/- (ರೂ.ಮೂವತ್ತು ಸಾವಿರ ಮಾತ್ರ) ಗಳು ಆಗಿರುತ್ತದೆ.
3. ಕನಿಷ್ಟ 10 ವರ್ಷ ಸೇವೆ ಸಲ್ಲಿಸಿದ ಜಿಲ್ಲಾ / ಪ್ರಧಾನ / ಸತ್ರ ನ್ಯಾಯಾಲಯ ಹಂತದ ನಿವೃತ್ತ ನ್ಯಾಯಾದೀಶರು/ ವಕೀಲರು ನೇರ ಸಂದರ್ಶನಕ್ಕೆ (Walk in Interview) ಹಾಜರಾಗಬಹುದು.
4. ನೇಮಕಗೊಂಡ ವಕೀಲರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವಿರುದ್ದ, ಸರ್ಕಾರ ಮತ್ತು ನಿರ್ದೇಶನಾಲಯದ ಅಧಿಕಾರಿಗಳನ್ನು ಪ್ರತಿವಾದಿಯನ್ನಾಗಿ ಮಾಡಿ ಕರ್ನಾಟಕ ಆಡಳಿತ ಮಂಡಳಿ ನ್ಯಾಯಮಂಡಳಿ/ ಉಚ್ಚ ನ್ಯಾಯಾಲಯ/ ಸರ್ವೋಚ್ಚ ನ್ಯಾಯಾಲಯ/ ವೃತ್ತಿಪರ ಮಂಡಳಿಗಳು/ ನ್ಯಾಯಾಲಯಗಳಲ್ಲಿ ದಾಖಲಾಗುವ ಮೊಕದ್ದಮೆಗಳನ್ನು, ನಿಂದನಾ ಅರ್ಜಿಗಳನ್ನು "ಎಕ್ಸಿಕ್ಯೂಷನ್" ಪ್ರಕರಣಗಳನ್ನು ನಿರ್ವಹಿಸುವುದು.
5. ನ್ಯಾಯಾಲಯ ಪ್ರಕರಣಗಲ್ಲಿ ಆಯುಕ್ತಾಲಯದ / ನಿರ್ದೇಶನಾಲಯದ ಸಂಬಂಧಪಟ್ಟ ಆಡಳಿತಾತ್ಮಕ ವಿಭಾಗಗಳು / ಕಾರ್ಯಕ್ರಮಾಧಿಕಾರಿಗಳಿಂದ ಮೊಕದ್ದಮೆಗಳಿಗೆ ಸಂಬಂಧಿಸಿದ ಮೂಲ ಕಡತಗಳನ್ನು ಪಡೆದುಕೊಂಡು ಪರಿಶೀಲಿಸಿ ಕಂಡಿಕೆವಾರು ಷರಾ/ ಕರಡು ಅಕ್ಷೇಪಣೆ ಹೇಳಿಕೆಗಳನ್ನು ತಯಾರಿಸಿ ಸಲ್ಲಿಸುವುದು.
6. ಯಾವುದೇ ಪ್ರಕರಣಗಳಲ್ಲಿ ಸ್ವೀಕೃತವಾಗುವ ತೀರ್ಪುಗಳನ್ನು ಪರಶೀಲಿಸಿ ಅಂತಹ ಪ್ರಕರಣದಲ್ಲಿ ಮೇಲ್ಮನವಿ ಸಲ್ಲಿಸುವ ಅವಶ್ಯಕತೆಯಿದೆಯೇ ಎಂಬ ಬಗ್ಗೆ ಅಭಿಪ್ರಾಯ ನೀಡಿ, ಅಗತ್ಯ ಕ್ರಮ ಕೈಗೊಳ್ಳುವುದು.
7. ಕಾನೂನು ಅಭಿಪ್ರಾಯಕ್ಕೆ ನಿರ್ದೇಶನಾಲಯದ ಆಡಳಿತಾತ್ಮಕ ಹಾಗೂ ಕಾರ್ಯಕ್ರಮಾಧಿಕಾರಿಗಳ ವಿಭಾಗಗಳಿಂದ ಕಳುಹಿಸುವ ಕಡತಗಳು ಮತ್ತು ಟಪ್ಪಣಿಗಳನ್ನು ಪರಿಶೀಲಿಸಿ ಲಿಖಿತ ಅಭಿಪ್ರಾಯ ನೀಡುವುದು.
8. ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ವ್ಯವಹರಿಸಲು ಮತ್ತು ಅವಶ್ಯವಿರುವ ಪ್ರಕರಣಗಳಿಗೆ ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ತರ್ಜುಮೆ ಕಾರ್ಯ ನಿರ್ವಹಿಸುವುದು.
9. ಇಚ್ಚೆಯುಳ್ಳವರು ತಮ್ಮ ಸ್ವ ವಿವರುಗಳೊಂದಿಗೆ, ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆನಂದರಾವ್ ವೃತ್ತ, ಬೆಂಗಳೂರು-560009, ಇವರಲ್ಲಿ ದಿನಾಂಕ:04.04.2018ರಂದು ಸಂಜೆ 4-00 ಗಂಟೆಗೆ ನೇರ ಸಂದರ್ಶನಕ್ಕೆ (Walk in Interview) ಹಾಜರಾಗತಕ್ಕದ್ದು.

ಆಯುಕ್ತರು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು